**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>**

**ಓ.ಎಸ್.ಸಂಖ್ಯೆ.677/2022** ಪಿ.ಡಬ್ಲ್ಯೂ.1

**ದಿನಾಂಕಃ 09.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ವಕೀಲರಿಂದಃ</u>**

ದಾವೆ ಹಾಕಲು ದಾಖಲಾತಿಗಳು ನಮ್ಮ ಊರಿನವರು ತೆಗೆಸಿಕೊಟ್ಟಿದ್ದರು. ಸದರಿ ದಾಖಲಾತಿಗಳನ್ನು ನಮ್ಮ ವಕೀಲರಿಗೆ ನಾನೆ ಕೊಟ್ಟಿರುತ್ತೇನೆ. ದಾವಾ ಆಸ್ತಿಗಳ ಬಗ್ಗೆ ಮತ್ತು ನನಗೆ ಎಷ್ಟು ಭಾಗಾಂಶ ಇದೆ ಎಂದು ನಮ್ಮ ವಕೀಲರಿಗೆ ನಾನೆ ಮಾಹಿತಿ ಕೊಟ್ಟಿದ್ದೇನೆ. ಸರ್ವೆ ನಂ.21/3 ಬಿ ನಲ್ಲಿ 38 ಗುಂಟೆ ಜಮೀನು ಇದೆ ಎಂದು ನಾನು ಹೇಳಿದ್ದು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಸಮಯದಲ್ಲಿ ಸರ್ವೆ ನಂ.21/3 ಬಿ ಯ ದಾಖಲಾತಿಗಳು ನನ್ನ ತಂದೆಯ ಹೆಸರಿನಲ್ಲಿ ಇದ್ದವು. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಂದೆಯ ಹೆಸರಿಗೆ ದಾಖಲಾತಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ದಾವೆ ಸಲ್ಲಿಸುವ ಸಮಯದಲ್ಲಿ ಸರ್ವೆ ನಂ.21/3 ಬಿ ಆಸ್ತಿ ಇರಲಿಲ್ಲ ಮತ್ತು ಸರ್ವೆ ನಂ.21/3(ಬಿ)(1) ಆಸ್ತಿ ಇತ್ತು ಎಂದರೆ ಸರಿಯಲ್ಲ.

ನನ್ನ ತಾತನ ಹೆಸರು ಬೈಯಣ್ಣ. ನನ್ನ ತಂದೆಯು ಹಿರಿಯ ಮಗ ಮತ್ತು ದಾಸಪ್ಪ ಕಿರಿಯ ಮಗನಾಗಿದ್ದನು. ದಾಸಪ್ಪ ಹಿರಿಯ ಮಗನಾಗಿದ್ದನು ನನ್ನ ತಂದೆ ಕಿರಿಯ ಮಗನಾಗಿದ್ದ ಎಂದರೆ ಸರಿಯಲ್ಲ. ದಾಸಪ್ಪನ ಹೆಸರಿನಲ್ಲಿಯೂ ಸಹ ಆಸ್ತಿಗಳು ಇದ್ದವು ಎಂದರೆ ಗೊತ್ತಿಲ್ಲ. ನಿಪಿ-19 ರಂತೆ ದಾಸಪ್ಪನ ಹೆಸರಿನಲ್ಲಿಯೂ ಸಹ ಆಸ್ತಿಗಳು ಇದ್ದವು ಎಂದರೆ ಗೊತ್ತಿಲ್ಲ. ನಿಪಿ-19 ರಂತೆ ಇರುವ ಜಮೀನುಗಳನ್ನು ಸದರಿ ದಾಸಪ್ಪ ನನ್ನ ಅಣ್ಣ ಮುನಿದಾಸಪ್ಪ ಮತ್ತು ಆತನ ಹೆಂಡತಿಯ ಹೆಸರಿಗೆ ವಿಲ್ ಮುಖಾಂತರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಸಹ ಸದರಿ ಜಮೀನುಗಳು ನನ್ನ ಅಣ್ಣ ಮುನಿದಾಸಪ್ಪನ ಹೆಸರಿನಲ್ಲಿ ಇವೆ ಎಂದರೆ ಗೊತ್ತಿಲ್ಲ.

ನಾನು ಷೆಡ್ಯೂಲ್ ನಲ್ಲಿ ಪೂರ್ವಕ್ಕೆ ಮುನಿದಾಸಪ್ಪನ ಜಮೀನು ಇದೆ ಎಂದು ಬರೆಸಿರುತ್ತೇನೆ ಎಂದರೆ ಗೊತ್ತಿಲ್ಲ. ಮುನಿದಾಸಪ್ಪ ಎಂದರೆ ನನ್ನ ಅಣ್ಣ ಎಂದರೆ ನಿಜ. ಸದರಿ ಮುನಿದಾಸಪ್ಪ ಮರಣ ಹೊಂದಿರುತ್ತಾರೆ. ಪಶ್ಚಿಮದ ಕಡೆ ಕೃಷ್ಣಪ್ಪನ ಜಮೀನು ಇದೆ ಎಂದು ಬರೆಯಲಾಗಿದೆ ಎಂದರೆ ನಿಜ.

ದಕ್ಷಿಣದ ಕಡೆ ಕೃಷ್ಣಪ್ಪ ನ ಜಮೀನು ಎಂದು ಬರೆಯಲಾಗಿದೆ ಎಂದರೆ ಗೊತ್ತಿಲ್ಲ. ಸದರಿ ಕೃಷ್ಣಪ್ಪ ನನ್ನ ಸಹೋದರ ಎಂದರೆ ನಿಜ. ಆತನು ಸಹ ಈ ದಾವೆಯಲ್ಲಿ ಪಾರ್ಟಿಯಾಗಿದ್ದಾನೆ ಎಂದರೆ ನಿಜ. ಆತನು ಸಹ 1 ವರ್ಷದ ಹಿಂದೆ ಮರಣ ಹೊಂದಿರುತ್ತಾರೆ ಎಂದು ಹೇಳುತ್ತಾರೆ. ಆತನಿಗೆ ಮದುವೆಯಾಗಿತ್ತು ಆದರೆ ಮಕ್ಕಳು ಇರಲಿಲ್ಲ. ಆತನ ಹೆಂಡತಿಯು ಸಹ ಮರಣ ಹೊಂದಿರುತ್ತಾರೆ. ದಾವಾ ಆಸ್ತಿಯಲ್ಲಿ ಪೂರ್ವಕ್ಕೆ ಮುನಿದಾಸಪ್ಪ, ಪಶ್ಚಿಮಕ್ಕೆ ಕೃಷ್ಣಪ್ಪ ಮತ್ತು ದಕ್ಷಿಣಕ್ಕೆ ಕೃಷ್ಣಪ್ಪ ಎಂದು ಬರೆಸಿದ್ದು ಆ ಆಸ್ತಿಗಳು ಹೇಗೆ ಬಂದವು ಎಂದು ನನಗೆ ಗೊತ್ತಿಲ್ಲ. ಆ ಜಮೀನುಗಳು ಸಹ ನನ್ನ ತಾತನಿಗೆ ಸೇರಿದಂತಹ ಜಮೀನುಗಳು ಆಗಿರುತ್ತವೆ. ನನ್ನ ತಾತನ ಕಡೆಯಿಂದ ನನ್ನ ಸಹೋದರರು ಆ ಜಮೀನುಗಳನ್ನು ಬರೆಸಿಕೊಂಡಿರುತ್ತಾರೆ. ನನ್ನ ತಾತನಿಗೆ 2 ಎಕರೆ ಜಮೀನು ಇತ್ತು. ನಾನು 2 ಎಕರೆ ಜಮೀನು ಸೇರಿಸಿ ಕೇಸ್ ಹಾಕಿಲ್ಲ. ನಾನು 5 ನೇ ಪ್ರತಿವಾದಿ ನಾರಾಯಣಪ್ಪನವರಿಗೆ ಮಾರಾಟ ಮಾಡಿರುವ ಜಮೀನಿಗೆ ಮಾತ್ರ ಈ ಕೇಸ್ ಹಾಕಿದ್ದೇನೆ ಎಂದರೆ ನಿಜ. ಸದರಿ ನಾರಾಯಣಪ್ಪನವರು ನಮ್ಮ ಊರಿನವರೇ ಆಗಿದ್ದಾರೆ ಎಂದರೆ ಗೊತ್ತಿಲ್ಲ. ನಾನು ನಮ್ಮ ಊರು ಬಿಟ್ಟು 8 ವರ್ಷವಾಗಿದೆ. ನಾನು ನಮ್ಮ ಎಲ್ಲಾ ಪಿತ್ರಾರ್ಜಿತ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ನಾನು ನನ್ನ ಅಣ್ಣ ಮತ್ತು ತಮ್ಮನ ಆಸ್ತಿಗಳು ಸಹ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ನಾನು ಇದೇ ಸರ್ವೆ ನಂಬರ್ ನಲ್ಲಿ 1 ಎಕರೆ ಜಮೀನು ಇದೆ ಎಂದು ಹೇಳಿದ್ದು ಆ ಜಮೀನನ್ನು ಸಹ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ಆ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರಲಿಲ್ಲ. ದಾವಾ ಸ್ವತ್ತು ಅಲ್ಲದೆ ಉಳಿಕೆ 1 ಎಕರೆ ಜಮೀನು ಯಾರ ಸ್ವಾಧೀನದಲ್ಲಿದೆ ಎಂದು ನನಗೆ ಗೊತ್ತಿಲ್ಲ. ಅದನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ. 5 ನೇ ಪ್ರತಿವಾದಿ ನಾರಾಯಣಪ್ಪನವರು ದಿನಾಂಕಃ 07.11.2008 ರಂದು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿಯು ಆ ರೀತಿ ಮಾರಾಟ ಮಾಡಿದ್ದರಿಂದ ನಾವು ಈ ದಾವೆ ಹಾಕಿದ್ದೇವೆ ಎಂದು ಹೇಳುತ್ತಾರೆ. ಆ ರೀತಿ 5 ನೇ ಪ್ರತಿವಾದಿಗೆ ದಾವಾ ಜಮೀನು ಮಾರಾಟ ಮಾಡಿರುವ ವಿಷಯ ನನಗೆ ಈ ದಾವೆ ಹಾಕುವ 1 ವರ್ಷದ ಮೊದಲು ತಿಳಿದುಬಂತು. ಆ ಸಮಯದಲ್ಲಿ 5 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೇನೆ. ನಾನು ಆ ರೀತಿ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯ ಹೆಂಡತಿ ಮಕ್ಕಳಿಗೂ ಸಹ ನಾವು ಪಾರ್ಟಿ ಮಾಡಿರುವುದಿಲ್ಲ ಎಂದರೆ ನಿಜ. 6 ನೇ ಪ್ರತಿವಾದಿಯು ಆತನ ಮಗನಾದ 7 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ದಾನಪತ್ರ ಬರೆದುಕೊಟ್ಟಿದ್ದಾನೆ ಎಂದರೆ ಗೊತ್ತಿಲ್ಲ.

ದಾವಾ ಸ್ವತ್ತು ನನ್ನ ತಂದೆ ಮತ್ತು ಆತನ ಸಹೋದರ ದಾಸಪ್ಪನಿಗೆ ಹೇಗೆ ಬಂದಿತ್ತು ಎಂದರೆ ತಂದೆಯಿಂದ ಮಕ್ಕಳಿಗೆ ಬಂದಿತ್ತು ಎಂದು ಹೇಳುತ್ತಾರೆ. ನನ್ನ ತಾತ ಅದು ಏನು ದಾಖಲೆ ಮಾಡಿಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಭಾಗ ಕೇಳಲು ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಅಣ್ಣ ಮತ್ತು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಆಗಿದ್ದವು ಎಂದರೆ ಗೊತ್ತಿಲ್ಲ. ಆ ರೀತಿ ಅವರ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ಅವರು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರಿಂದ ನನಗೆ ಯಾವುದೇ ಹಕ್ಕು ಅಥವಾ ಭಾಗ ದಾವಾ ಆಸ್ತಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನ್ನ ಸಹೋದರಿಯಾಗಿದ್ದಾರೆ. 4 ನೇ ಪ್ರತಿವಾದಿ ದೇವಮ್ಮ ಈ ದಾವೆಯಲ್ಲಿ ಪಾರ್ಟಿಯಾಗಿರುವುದಿಲ್ಲ.

7 ನೇ ಪ್ರತಿವಾದಿಯು ದಾನಪತ್ರದ ಆಧಾರದ ಮೇಲೆ ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ಅದೇ ಪ್ರಕಾರ ಕಂದಾಯ ದಾಖಲಾತಿಗಳು ಅವರ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಆಸ್ತಿ ಮೇಲೆ ಹಣ ಪಡೆಯುವ ಉದ್ದೇಶದಿಂದ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿರುವ ಸಮಯದಲ್ಲಿ ನಾವು ಆತನಿಗೆ ತೊಂದರೆ ಕೊಟ್ಟಿದ್ದೇವೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು ಆತನಿಗೆ ಅದು ನಮ್ಮ ತಂದೆಯ ಆಸ್ತಿ ಎಂದು ಹೇಳಿದ್ದೇವೆ ಗಲಾಟೆ ಮಾಡಿಲ್ಲ ಎಂದು ಹೇಳುತ್ತಾರೆ. ದಿನಾಂಕಃ 11.07.2023 ರಂದು ಜನಗಳನ್ನು ಜಮೀನಿನ ಬಳಿ ಕರೆದುಕೊಂಡು ಹೋಗಿ ನಾವು 7 ನೇ ಪ್ರತಿವಾದಿಯ ಜೊತೆ ಗಲಾಟೆ ಮಾಡಿದ್ದೆವು ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇಲ್ಲದೆ ಇರುವ ಕಾರಣದಿಂದ ನ್ಯಾಯಾಲಯದ ಶುಲ್ಕವನ್ನು ಸರಿಯಾಗಿ ಪಾವತಿಸಿಲ್ಲ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಹೊಸಕೋಟೆ.**